# PLUS TWO SAMPLE QUESTION PAPER

## SUBJECT: KANNADA (LANGUGE)

# SET 1

# Sample Question paper – (Kannada Language)

## 1. Weight to Unit / Content and Learning Outcome

| ಕ್ರ.ಸ | ಘಟಕ | ಕಲಿಕಾ ಸಾಧನೆಗಳು | ಅಂಕಗಳು | ಶೇಕಡಾ |
|---|---|---|---|---|
| 1 | ಸಿರಿಬೆಳಸು | 1.1,1.2, 1.3,1.4 | 20 | 25 |
| 2 | ನವಪಲ್ಲವ | 2.1,2.2,2.3, 2.10 | 9 | 11.25 |
| 3 | ಸಂಸ್ಕೃತಿ ಸುಮ | 3.2,3.3,3.12,3.13 | 20 (–8) = 12 | 15 |
| 4 | ಬೆಳ್ಳಿತೆರೆ | 4.9,4.10,4.15 | 17 | 21.25 |
| 5 | ನುಡಿಸಿರಿ | 5.2,5.3,5.19,5.20,5.21 | 30 (–8) = 22 | 27.50 |
| | TOTAL | | 96–16=80 | 100 |

# Sample Question paper – (Kannada Language)

## 2. Weight to Thinking Skills

| Sl.No. | Thinking Skills | Score | Percentage |
|---|---|---|---|
| 1 | Conceptual understanding | 48 | 60 |
| 2 | Conceptual generation | 32 | 40 |
| | | 80 | 100 |

# Sample Question paper – (Kannada Language)

## 3. Weight to Type of Questions

| Sl.No | Type | No.of Questions | Score | Percentage |
|---|---|---|---|---|
| 1 | Objective | 12 | 12 | 15 |
| 2 | Short Answer | 13 | 52 | 65 |
| 3 | Essay | 2 | 16 | 20 |
| | Total | 27 | 80 | 100 |

# Sample Question paper – (Kannada Language)

## 4. Blue Print    ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ–ನೀಲ ನಕ್ಷೆ

| ಕ್ರ.ಸ. | Thinking Skills<br><br>Content | Thinking Skills Conceptual Understanding | | | Thinking Skills Conceptual Generation | | | TOTAL |
|---|---|---|---|---|---|---|---|---|
| | | OBJ | S A | ESSAY | OBJ | S A | ESSAY | |
| 1 | ಊರ್ಮಿಳಾ | 1(1) | | | 1(1) | | | 2 |
| 2 | ಕೆರೆಯ ದಡದಲ್ಲಿ | | 5(1) | | | | | 5 |
| 3 | ಅವರವರ ದಾರಿ | 1(1) | | | | 5(1) | | 6 |
| 4 | ನೆರೆ | | 2(1) | | | 5(1) | | 7 |
| 5 | ಅಪ್ಪನೂ ಒಲೆಯುರಿಯೂ | 1(1) | | | | | | 1 |
| 6 | ತಾಯಿ | | 4(1) | | 1(1) | | | 5 |
| 7 | ಸಾವಿರಾರು ನದಿಗಳು | 1(1) | | | | | | 1 |
| 8 | ನೀರವ ರಾತ್ರಿಯ ಮಾಯಾಲೋಕ | | 2(1) | | | | | 2 |
| 9 | ಜಾಲಿಯ ಮರದಂತೆ | | 4(1) | | | | | 4 |
| 10 | ನಡೆವುದೊಂದೇ ಭೂಮಿ | | 4(1) | | | | | 4 |
| 11 | ಸುಬ್ಬಣ್ಣ | | | 8(1) | | 4(1) | | 12 |
| 12 | ಬಣ್ಣದ ಲೋಕ | | 3(1) | | | | 8(1) C | 3 |
| 13 | ಆಗದು ಎಂದು | 1(1) | | | | | | 1 |
| 14 | ಬೂತಯ್ಯನ ಮಗ ಅಯ್ಯು | | | | | 5(1) | | 5 |
| 15 | ನಾಡಸಿರಿ | 1(1) | 5(1) | | | | | 6 |
| 16 | ಸಕ್ಕರೆಗುಪ್ಪಂ ಪರಿಮಾಳ್ವರೇ | | | | 1(1) | | 8(1) | 9 |
| 17 | ತರುಣಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು | | 4(1) | | 1(1) | | | 5 |
| 18 | ಗುರುವಚನಮಲಂಘನೀಯಂ | 1(1) | | 8(1) C | 1(1) | | | 2 |
| | TOTAL | 7(7) | 33(9) | 16(2) – 8= 8 | 5(5) | 19(4) | 16(2)– 8= 8 | 80 |
| | | | 48(17) | | | 32(10) | | 80(27) |

# HSE II – SAMPLE QUESTION PAPER

# SUBJECT - KANNADA (LANGUAGE)

Time : 2.30 Hrs

Cool of time : 15 Mnts

Max. Markls : 80

<u>ಸೂಚನೆಗಳು</u>

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

(ಒಂದರಿಂದ ನಾಲ್ಕರವರೆಗಿನ ಪ್ರಶ್ನೆಗಳಿಗೆ ಆವರಣದಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ)

1. 'ಊರ್ಮಿಳಾ' ಕೃತಿಯನ್ನು ಕಯ್ಯಾರ ಕಿಞ್ಞಣ್ಣ ರೈಗಳ ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ? **(1)**

   (ಐಕ್ಯಗಾನ, ಪುನರ್ನವ, ಶ್ರೀಮುಖ, ಚೇತನ)

2. 'ಸೂರ್ಯೋದಯ' – ಇಲ್ಲಿನ ಸಂಧಿ **(1)**

   (ಸವರ್ಣದೀರ್ಘ ಸಂಧಿ, ಲೋಪ ಸಂಧಿ, ಆದೇಶ ಸಂಧಿ, ಗುಣ ಸಂಧಿ)

3. 'ಗುರುವಚನಮಲಂಘನೀಯಮ್' ಎಂದು ಧುರ್ಯೋಧನನಲ್ಲಿ ಭಿನ್ನವಿಸಿಕೊಂಡವರು ಯಾರು? **(1)**

   (ಸಂಜಯ, ಭೀಷ್ಮ, ಗಾಂಧರಿ, ಧೃತರಾಷ್ಟ್ರ)

4. ಈ ಕೆಳಗಿನವುಗಳಲ್ಲಿ ಸಾಂಗತ್ಯ ಕೃತಿ ಯಾವುದು? **(1)**

   (ರಾಮನಾಥ ಚರಿತೆ, ಶರಭ ಚಾರಿತ್ರ್ಯ, ವೀರೇಶ ಚರಿತೆ, ಸಾಹಸಭೀಮ ವಿಜಯ)

5. ಸರಿಹೊಂದಿಸಿ ಬರೆಯಿರಿ. (4*1=4)

| ಅ ವಿಭಾಗ | ಆ ವಿಭಾಗ |
|---|---|
| ಜಿ. ಎಸ್. ಶಿವರುದ್ರಪ್ಪ | ಮೆರವಣಿಗೆ |
| ಆರ್. ಎನ್. ಜಯಗೋಪಾಲ್ | ಕಡಲಿಗೆಷ್ಟೊಂದು ಬಾಗಿಲು |
| ಡಾ. ಸಿದ್ಧಲಿಂಗಯ್ಯ | ಬಾಳೊಂದು ಭಾವಗೀತೆ |
| ರೂಪ ಹಾಸನ | ಸೌಂದರ್ಯ ಸಮೀಕ್ಷೆ |

(ಆರರಿಂದ ಹದಿನೈದರರವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ)

6. ಉಡುರಾಜ – ಈ ಪದದ ಅರ್ಥವನ್ನು ಬರೆಯಿರಿ (1)

7. ಆಡು – ಈ ಪದದ ಎರಡು ನಿಷೇಧಾರ್ಥಗಳನ್ನು ತಿಳಿಸಿರಿ. (1)

8. 'ಮನೋಜ' – ಈ ಪದದ ಎರಡು ಪರ್ಯಾಯ ಪದಗಳನ್ನು ಬರೆಯಿರಿ. (1)

9. ಮೈದೊಳೆ – ವಿಗ್ರಹವಾಕ್ಯ ಬರೆದು ಸಮಾಸ ಹೆಸರಿಸಿರಿ. (1)

10. 'ನೆರೆ' ಎಂಬ ಪದ ನಾಮಪದವಾಗಿಯೂ ಕ್ರಿಯಾಪದವಾಗಿಯೂ ಬರುವಂತೆ ವಾಕ್ಯಗಳನ್ನು ರಚಿಸಿರಿ. (2)

11. ಕೆಳಗೆ ಕೊಟ್ಟಿರುವ ಗದ್ಯಭಾಗಕ್ಕೆ ಸೂಕ್ತ ಲೇಖನಚಿಹ್ನೆಗಳನ್ನು ಅಳವಡಿಸಿರಿ. (2)

*ಮುಟ್ಟೋ ಹಂಗಿಲ್ಲ ದುರ್ವಾಸನೆಕೊಡ್ತಿದೆ ಎಂದು ಬೆರಳಿನಲ್ಲಿ ಮುಚ್ಚಿ ಪ್ಯಾರ ಹೇಳಿದ ಹೋಗೋ ಹೋಗೋ ನೀನೇ ವಾಸನೆ ಕೊಟ್ಟು ಅದರ ಮೇಲೆ ಹೇಳಿದ್ದೀಯ ಅಷ್ಟೆ ಎಂದು ಆಶ್ಚರ್ಯದಿಂದ ನುಡಿದೆ ನಾನು*

12. ಕೆಳಗೆ ಕೊಟ್ಟಿರುವವುಗಳಲ್ಲಿ ಒಂದರ ಕುರಿತು ಟಿಪ್ಪಣಿ ಬರೆಯಿರಿ. (3)

*ಅ) ಸಿನೆಮಾ ಚಿತ್ರಕತೆ*

*ಆ). ಛಾಯಾಗ್ರಹಣ*

13. ಕೆಳಗಿನ ತ್ರಿಪದಿಯ ಆಶಯವನ್ನು ಬರೆಯಿರಿ. (4)

*ತನ್ನ ನೋಡಲಿ ಎಂದು ಕನ್ನಡಿಯು ಕರೆವುದೆ?*

*ತನ್ನಲ್ಲಿ ಜ್ಞಾನ ವುದಿಸಿದ – ಮಹಾತ್ಮನು*

*ಕನ್ನಡಿಯು ಜಗಕೆ ಸರ್ವಜ್ಞ*

*14*. ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಸಂಕ್ಷೇಪಿಸಿ ಬರೆಯಿರಿ. (4)

*ನಮ್ಮ ನಟರನ್ನು ಸಾಮಾನ್ಯವಾಗಿ ವಿಲಾಯಿತಿಯ ನಟರಿಗೆ ಹೋಲಿಸುವುದುಂಟು. ವೀರಣ್ಣನವರನ್ನು 'ಕರ್ನಾಟಕದ ಚಾರ್ಲಿ ಚಾಪ್ಲಿನ್' ಎಂದು ಕೆಲವರು ಕರೆದಿದ್ದಾರೆ. ಚಾರ್ಲಿ ಶ್ರೇಷ್ಠ ದರ್ಜೆಯ ಹಾಸ್ಯಗಾರ. ಕರುಣಾಮಯ ಹಾಸ್ಯೋತ್ಪಾದನೆಯಲ್ಲಿ ಅವನು ಪರಮಸಿದ್ಧ. ಆದರೆ ವೀರಣ್ಣನವರ ವಿವಿಧತೆ ಅವನಲ್ಲಿಲ್ಲ. ಮಾಣವಕ, ಕಳ್ಳ, ಬ್ರಾಹ್ಮಣ, ವೈಶ್ಯ,, ವಿರೋಚನ ಪಾತ್ರಗಳು ಒಂದೊಂದೂ ಒಂದೊಂದು ಬಗೆ, ಸಂಪ್ರದಾಯಕ್ಕೆ ಸೇರಿದವು. ಚಾರ್ಲಿ ಒಬ್ಬ ಹಾದಿಹೋಕನ ಪಾತ್ರದಲ್ಲಿ ತನ್ನೆಲ್ಲ ಸಿದ್ಧಾಂತ, ಅನುಭವಗಳನ್ನು ಅಡಗಿಸಿಬಿಡುತ್ತಾನೆ. ಸಮಾಜದ ವಿವಿಧ ವರ್ಗದ ವ್ಯಕ್ತಿಗಳನ್ನು ಅವನು ಚಿತ್ರಿಸಲಾರ. ಅವನಲ್ಲಿ ವಿಸ್ತಾರವಿಲ್ಲ. ಆಳವಿದೆ. ವೀರಣ್ಣನವರಲ್ಲಿ ಆಳ, ವಿಸ್ತಾರಗಳೆರಡರ ಸಂಗಮವಿದೆ.*

15. ಅಬ್ಬಕ್ಕಳಿಗೆ ತಾನು ಅಪರಾಧಿ ಎಂಬ ಭಾವನೆ ಪದೇ ಪದೇ ಮೂಡಿಬರಲು ಕಾರಣವೇನು? ವಿಶದಪಡಿಸಿರಿ. (4)

16. ಕೆಳಗೆ ನೀಡಿರುವ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿರಿ. (4)

*ಒಡೆಯನಳಿವಂ ಕಾಣ್ಬ ಪಾಪಿಯೆನ್ನಿಂದಾರು*

*ಕಡೆಯ ನರಕಿಗಳು ಬಳಿಕಳಿದಲ್ಲಿಫಲವಾವು*

*ದೊಡಲುವಿಡಿದಾನೊಮ್ಮೆ ಮಡಿಯದಿಹುದಿಲ್ಲಿಲ್ಲ ಮಡಿಯುತ್ತ ಪತಿಯ ಮುಂದೆ*

(ಹದಿನೇಳರಿಂದ ಇಪ್ಪತ್ತರವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ)

17. ಪುರಂದರದಾಸರು ಜಾಲಿಯ ಮರವನ್ನು ದುರ್ಜನರಿಗೆ ಸಮೀಕರಿಸಿ ಹೇಳಿರುವುದರ ಔಚಿತ್ಯದ ಕುರಿತು ಟಿಪ್ಪಣಿ ಬರೆಯಿರಿ. (4)

18. ಸಣ್ಣಕತೆಯೊಂದು ನಿರ್ದೇಶಕನ ಜಾಣ್ಮೆಯಿಂದ ಸಿನೆಮವಾಗಿ ರೂಪುಗೊಂಡು ಯಶಸ್ಸನ್ನು ಪಡೆದ ಬಗೆಯನ್ನು 'ಬೂತಯ್ಯನ ಮಗ ಅಯ್ಯು' ಪಾಠಭಾಗದ ಆಧಾರದಲ್ಲಿ ವಿವರಿಸಿರಿ. (5)

19. 'ಅವರವರ ದಾರಿ' ಕವಿತೆಯ ಆಶಯವನ್ನು ವಿಶದಪಡಿಸಿರಿ. (5)

20. ಹಿಂದೆ ಇದ್ದ ಅದೆಷ್ಟೋ ಜೀವಿಗಳು ಇದೀಗ ಕಣ್ಮರೆಯಾಗಿವೆ ಇಲ್ಲವೇ ವಿನಾಶದಂಚಿನಲ್ಲಿವೆ. ಇದಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿಕೊಂಡು 'ವಿನಾಶದಂಚಿನಲ್ಲಿರುವ ಜೀವಸಂಕುಲ' ಎಂಬ ವಿಷಯದ ಮೇಲೆ ಪ್ರಬಂಧವೊಂದನ್ನು ಬರೆಯಿರಿ. (5)

21. ಮೂಕಪ್ರಾಣಿಯೊಂದರ ಅಸಹಾಯಕತೆಯ ಕೂಗು 'ನೆರೆ' ಕತೆಯಲ್ಲಿ ಪ್ರತಿಬಿಂಬಿತವಾದ ಬಗೆಯನ್ನು ವಿವರಿಸಿರಿ. (5)

22. ಕನ್ನಡನಾಡಿನ ವೈಭವದ ಕುರಿತು 'ನಾಡಸಿರಿ' ಕಾವ್ಯಭಾಗದಲ್ಲಿ ಹೇಳಿರುವ ವಿಚಾರಗಳನ್ನು ಸಂಗ್ರಹವಾಗಿ ಬರೆಯಿರಿ. (5)

(ಒಂದುವರೆ ಪುಟಕ್ಕೆ ಮೀರದಂತೆ ಬರೆಯಿರಿ.)

23. ಸುಬ್ಬಣ್ಣ ಓರ್ವ ಕಲಾವಿದನಾಗಿ ತನ್ನ ಬದುಕನ್ನು ಸಾರ್ಥಕಪಡಿಸಿಕೊಂಡ ಬಗೆಯನ್ನು ನಿರೂಪಿಸಿರಿ.

ಅಥವಾ

'ಸಿನಿಮ ಒಂದು ಜನಪ್ರಿಯ ದೃಶ್ಯ ಮಾಧ್ಯಮ' ಎಂಬ ವಿಷಯದ ಮೇಲೆ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ಸಿದ್ಧಪಡಿಸಿರಿ. (8)

24. ನೀವು ಓದಿದ ಶತಕ ಪದ್ಯಗಳಲ್ಲಿ ವ್ಯಕ್ತವಾಗುವ ಸಾಮಾಜಿಕ ನೀತಿಯ ಕುರಿತು ವಿಮರ್ಶಾತ್ಮಕ ಲೇಖನವೊಂದನ್ನು ಬರೆಯಿರಿ.

ಅಥವಾ

ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಧುರ್ಯೋಧನನಿಗೆ ಧೃತರಾಷ್ಟ್ರನು ಭಿನ್ನವಿಸಿಕೊಳ್ಳಲು ಕಾರಣವೇನು? ಅದಕ್ಕೆ ಅವನ ಪ್ರತಿಕ್ರೀಯೆ ಏನಾಗಿತ್ತು? ವಿವರಿಸಿರಿ. (8)

# Sample Question paper – (Kannada Language)

## 6.Answer Key/Value Points

| Q.No | Answer Key/Value Points | score | Toatal |
|---|---|---|---|
| 1 | ಶ್ರೀಮುಖ | 1 | 1 |
| 2 | ಗುಣ ಸಂಧಿ | 1 | 1 |
| 3 | ಗಾಂಧಾರಿ | 1 | 1 |
| 4 | ರಾಮನಾಥ ಚರಿತೆ | 1 | 1 |
| 5 ಅ | ಸೌಂದರ್ಯ ಸಮೀಕ್ಷೆ | 1 | 1 |
| 5 ಆ | ಬಾಳೊಂದು ಭಾವಗೀತೆ | 1 | 1 |
| 5 ಇ | ಮೆರವಣಿಗೆ | 1 | 1 |
| 5 ಈ | ಕಡಲಿಗೆಷ್ಟೊಂದು ಬಾಗಿಲು | 1 | 1 |
| 6 | ಚಂದ್ರ | 1 | 1 |
| 7 | ಆಡೆನು, ಆಡಲಿಲ್ಲ | 1 | 1 |
| 8 | ಮನ್ಮಥ, ಕಾಮ | 1 | 1 |
| 9 | ಮೈಯನ್ನು ತೊಳೆ – ಕ್ರಿಯಾ ಸಮಾಸ | 1 | 1 |
| 10 | ಹಾದಿ ತುಂಬ ಜನ ನೆರೆದಿದ್ದರು. (ಕ್ರಿಯಾ ಪದ)<br>ನೆರೆ ಸಂತ್ರಸ್ತರ ಗೋಳು ಮುಗಿಲು ಮುಟ್ಟಿತ್ತು (ನಾಮ ಪದ) | 2 | 2 |
| 11 | ಸೂಕ್ತ ಲೇಖನ ಚಿಹ್ನೆಗಳನ್ನು ಅಳವಡಿಸಿದ್ದರೆ | 2 | 2 |
| 12 | ಸಿನಿಮಾ ಚಿತ್ರಕತೆ – ಚಿತ್ರಕತೆ ಸಿನಿಮಾದ ಪ್ರಧಾನವಾದ ಘಟಕ. ಚಿತ್ರಕತೆ ಬಾಲಿಶವಾದರೆ ಸಿನಿಮಾ ಸೋಲುತ್ತದೆ. ಬಿಗಿಯಾದ ಕತೆಯಿಂದ ಕೂಡಿದ ಸಿನಿಮಾ ಯಶಸ್ಸನ್ನು ಪಡೆಯುತ್ತದೆ– ಚಿತ್ರಕತೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸುವಲ್ಲಿ ನಿರ್ದೇಶಕನ ಜಾಣ್ಮೆ – ಇವೇ ಮೊದಲಾದ ಅಂಶಗಳನ್ನು ಹೇಳಿದ್ದರೆ.<br><br>ಅಥವಾ<br><br>ಛಾಯಾಗ್ರಹಣ – ಚಲನಚಿತ್ರದ ತಾಂತ್ರಿಕ ಅಂಶಗಳಲ್ಲಿ ಇದೂ ಒಂದು. ಉತ್ತಮ ಛಾಯಾಗ್ರಹಣ ಚಲನಚಿತ್ರದ ಗುಣಾತ್ಮಕ ಅಂಶಗಳಲ್ಲಿ ಒಂದು– ಛಾಯಾಗ್ರಹಣದಿಂದ ಮನಸೆಳೆದ ಚಲನಚಿತ್ರಗಳು, ಛಾಯಾಗ್ರಾಹಕನ ಕೈಚಳಕ – ಇವುಗಳನ್ನು ವಿವರಿಸಿದ್ದರೆ | 3 | 3 |
| 13 | ಕನ್ನಡಿಯು ಪ್ರತಿಬಿಂಬವನ್ನು ತೋರಿಸುತ್ತದೆ. ಅದು ತನ್ನನ್ನು ನೋಡಬೇಕೆಂದು ಕೂಗಿ ಕರೆಯುವುದಿಲ್ಲ. ನಾವೇ ಆಕರ್ಷಿತರಾಗಿ ನಮ್ಮ ಪ್ರತಿಬಿಂಬವನ್ನು ನೋಡುವುದಕ್ಕೆ ಅದರ ಬಳಿಗೆ ಸಾಗುತ್ತೇವೆ. ಮಹಾತ್ಮನು ಕನ್ನಡಿಯಂತಿರಬೇಕು. ಅವನ ಮಾರ್ಗದರ್ಶನವನ್ನು ಬಯಸಿ ಜನ ತಾವಾಗಿ ಬರಬೇಕು – ಇವೇ ಮುಂತಾದ ವಿಚಾರಗಳನ್ನು ಹೇಳಿದ್ದರೆ. | 2<br>2 | 4 |
| 14 | ವೀರಣ್ಣನವರನ್ನು 'ಕರ್ನಾಟಕದ ಚಾರ್ಲಿಚಾಪ್ಲಿನ್' ಎಂದು ಕರೆದದ್ದಿದೆ. ಆದರೆ ವೀರಣ್ಣನವರ ಅಭಿನಯದಲ್ಲಿರುವ ವಿವಿಧತೆ ಅವನಲ್ಲಿಲ್ಲ. ಅವರ ಒಂದೊಂದು ಪಾತ್ರವೂ ಒಂದೊಂದು ಬಗೆ, ಒಂದೊಂದು ಸಂಪ್ರದಾಯಕ್ಕೆ ಸೇರಿದವು. ವೀರಣ್ಣನವರಲ್ಲಿ ಆಳ ವಿಸ್ತಾರಗಳ ಸಂಗಮವಿದೆ. | 4 | 4 |
| 15 | ಕ್ರೂರಿಯಾದ ತಾಯಿಯೊಬ್ಬಳ ಕತೆಯನ್ನು ತನ್ನ ಎಳೆಯ ಮಗನಿಗೆ ಹೇಳುವುದು, ಮಗನನ್ನು ವಿಪತ್ತಿಗೆ ದೂಡಿದ ಆ ತಾಯಿಯಂತೆಯೇ ತಾನೂ ತನ್ನ ಹಿರಿಯ ಮಗನನ್ನು ವಿಪತ್ತಿಗೆ ದೂಡಿದೆನೆಂಬ ಅಪರಾಧ ಪ್ರಜ್ಞೆ– ಇವೇ ಮೊದಲಾದವುಗಳನ್ನು ವಿಶದಪಡಿಸಿದ್ದರೆ. | 2<br>2 | 4 |
| 16 | ಪ್ರಸ್ತಾರ ಹಾಕಿದ್ದಕ್ಕೆ<br>ಗಣ ವಿಭಜನೆಗೆ<br>ಛಂದಸ್ಸನ್ನು ಹೆಸರಿಸಿದ್ದಕ್ಕೆ | 2<br>1<br>1 | 4 |
| 17 | ಜಾಲಿಯ ಮರಕ್ಕೆ ನೆರಳಿಲ್ಲ, ಹಣ್ಣಿಲ್ಲ, ಹೂವಿಲ್ಲ, ಬಂದವರಿಗೆ ಆಸರೆಯನ್ನು ನೀಡುವದೂ ಇಲ್ಲ. ಅಂತೆಯೇ ದುರ್ಜನರು. ಅವರಿಂದ ಉಪಕಾರ ತೊಟಕಾದರೂ ಇಲ್ಲ. ಸದಾ ದುರ್ಗುಣಗಳನ್ನೇ ಪ್ರದರ್ಶಿಸುವ ಇವರಿಂದ ಸಮಜಕ್ಕೆ ಕೆಟ್ಟದ್ದಲ್ಲದೆ ಒಳಿತಿಲ್ಲ | 2 | 4 |

| | | | |
|---|---|---|---|
| | – ಇವೇ ಮೊದಲಾದವುಗಳನ್ನು ಬರೆದಿದ್ದರೆ. | 2 | |
| 18 | ಗೊರೂರರ ಸಣ್ಣಕತೆ ಬೂತಯ್ಯನ ಮಗ ಅಯ್ಯು ಚಲನಚಿತ್ರವಾಗಿ ಬದಲಾದಾಗ ನಿರ್ದೇಶಕನ ಜಾಣ್ಮೆಯಿಂದ ಚಿತ್ರಕತೆಯಲ್ಲಿ ಆಗಿರುವ ಮಾರ್ಪಾಟು, ಮೂಲ ಕತೆಗೆ ಭಂಗವಾಗದಂತೆ ಗ್ರಾಮೀಣ ಬದುಕನ್ನು ತೆರೆಯ ಮೇಲೆ ಮೂಡಿಸಿದ ನಿರ್ದೇಶಕ ಸಿದ್ಧಲಿಂಗಯ್ಯನವರ ಪ್ರತಿಭೆ, ಪಾತ್ರಗಳ ಆಯ್ಕೆ, ಸನ್ನಿವೇಶಗಳ ಕಲ್ಪನೆ, ಮನಸೆಳೆದ ಛಾಯಾಗ್ರಹಣ ಮೊದಲಾದವುಗಳಿಂದ ಸಿನಿಮ ಯಶಸ್ಸನ್ನು ಪಡೆದ ಬಗೆಯನ್ನು ಪಾಠಭಾಗದ ಆಧಾರದಲ್ಲಿ ನಿರೂಪಿಸಿದ್ದರೆ. | 3<br>2 | 5 |
| 19 | ನಾನಾ ಕಾರಣಗಳಿಂದ ಶಿಥಿಲವಾಗುತ್ತಿರುವ ಸಂಬಂಧಗಳು – ಅಣುಕುಟುಂಬ ಪದ್ಧತಿ – ವೃತ್ತಿ ಸಂಬಂಧವಾಗಿ ಪರವೂರಿನಲ್ಲಿ ನೆಲೆಸಿರುವ ಮಕ್ಕಳು – ವೃದ್ಧ ತಂದೆ ತಾಯಿಯರ ಗೋಳು – ಅವರನ್ನು ಬಾಧಿಸುವ ಏಕಾಂಗಿತನ – ಎಂತಾದರೂ ಮಕ್ಕಳು ಚೆನ್ನಾಗಿರಲಿ ಎಂಬ ಹಾರೈಕೆ . . . ಇವೇ ಮೊದಲಾದವುಗಳನ್ನು ಅಭಿವ್ಯಕ್ತಿಪಡಿಸಿದ್ದರೆ. | 3<br>2 | 5 |
| 20 | ನಾನಾ ಕಾರಣಗಳಿಂದ ಮಲಿನವಾಗುವ ಪರಿಸರ – ಅರಣ್ಯಗಳ ನಾಶ – ಜೀವಿಗಳ ಆವಾಸ ಕೇಂದ್ರಗಳ ಆಕ್ರಮಣ – ಜೀವಿಗಳಿಗೆ ಪ್ರತಿಕೂಲ ಪರಿಸರ – ಜೀವ ವೈವಿಧ್ಯ ನಾಶ – ಸ್ವತಂತ್ರ ವಿಹಾರಕ್ಕೆ ತಡೆ – . . . ಇವೇ ಮೊದಲಾದವುಗಳನ್ನು ಒಳಗೊಂಡು ಬರೆದ ಪ್ರಬಂಧಕ್ಕೆ<br>ಪ್ರಸ್ತಾವನೆ, ವಿಷಯ ವಿಸ್ತಾರ, ಉಪಸಂಹಾರಗಳನ್ನೊಳಗೊಂಡ ಪ್ರಬಂಧ ಸ್ವರೂಪಕ್ಕೆ | 3<br>2 | 5 |
| 21 | ಅನಿರೀಕ್ಷಿತ ನೆರೆಯಿಂದ ಜಲಾವೃತವಾದ ಚೇನ್ನ ಪರಯನ ಮನೆ – ತನ್ನ ಹಾಗೂ ತನ್ನ ಪರಿವಾರವನ್ನು ರಕ್ಷಿಸುವ ಭರದಲ್ಲಿ ಸಾಕುನಾಯಿಯನ್ನು ಮರೆತ ಸನ್ನಿವೇಶ – ಅನಾಥವಾದ ನಾಯಿಯ ಪರಿಸ್ಥಿತಿ – ರಕ್ಷಣೆಗಾಗಿ ಮೊರೆಯಿಡುವುದು – ಹಸಿವಿನ ಕೂಗು – ವಿಪತ್ತಿನ ಸಂದರ್ಭದಲ್ಲಿ ನಾಯಿ ತೋರಿದ ಸ್ವಾಮಿನಿಷ್ಠೆ – ಅದರ ದಾರುಣ ಅಂತ್ಯ . . ಇತ್ಯಾದಿ | 5 | 5 |
| 22 | ಕನ್ನಡ ನಾಡಿನ ಕುರಿತಾದ ಭೌಗೋಳಿಕ ವಿಸ್ತಾರ – ಸಮೃದ್ಧವಾಗಿರುವ ಜಲ ಸಂಪತ್ತು, ಕೃಷಿ ಭೂಮಿ – ನೋಡುಗರ ಕಣ್ಣಿಗೆ ಪಾರಣೆ – ವೈವಿಧ್ಯ ಬೆಳೆ – ಪಕ್ಷಿ ಸಂಕುಲ – ಯುವಕರ ಯುವತಿಯರ ಜಾಣ್ಮೆ ಹಾಗೂ ತ್ಯಾಗ ಮನೋಭಾವ – ಶ್ರಮ ಜೀವನ. | 5 | 5 |
| 23 | ತೊರೆಯಪುರಕ್ಕೆ ಸುಬ್ಬಣ್ಣನ ಆಗಮನ – ಎಲ್ಲವನ್ನು ಬಿಟ್ಟು ಬೈರಾಗಿ ಬದುಕು – ಊರ ನದಿಯ ಬಳಿಯಲ್ಲಿ ಧ್ಯಾನ – ವೆಂಕಟ್ರಮಣ ಮತ್ತು ಸುಬ್ಬಣ್ಣನ ನಡುವಿನ ಭೇಟಿ, ವಿರಸ – ಪಿಟೀಲನ್ನು ನದಿಗೆಸೆಯುವುದು – ಅದನ್ನು ಮರಳಿ ತಂದ ವೆಂಕಟ್ರಮಣ –ಅವನ ಗುಣ ಸ್ವಭಾವಗಳಿಂದ ಸುಬ್ಬಣ್ಣ ಆಕರ್ಷಿತನಾಗುವುದು, ಶಿಷ್ಯನಾಗಿ ಸ್ವೀಕರಿಸುವುದು – ದೇವಾಲಯದಲ್ಲಿ ಪಿಟೀಲು ನುಡಿಸುವುದು – ತನ್ನ ಮಗಳಿಗೆ ಸಂಗೀತವನ್ನು ಕಲಿಸಿ ಕೊಡಲು ಸುಬೇದಾರರ ಒತ್ತಾಯ – ಸುಬ್ಬಣ್ಣನ ನಿರಾಕರಣೆ – ಸುಬೇದಾರರು ತಾವೇ ಖುದ್ದಾಗಿ ಭೇಟಿಯಾದ ಬಳಿಕ ನಿರ್ಧಾರ ಬದಲಿಸಿದುದು – ಸುಬೇದಾರರ ಕುಟುಂಬಕ್ಕೆ ಹತ್ತಿರವಾದುದು – ಕಲಾವಿದನಾಗಿ ಸಾರ್ಥಕಪಡಿಸಿಕೊಂಡ ಬದುಕು.<br><br>ಅಥವಾ<br><br>ಜನಪ್ರಿಯ ದೃಶ್ಯ ಮಾಧ್ಯಮಗಳಲ್ಲಿ ಸಿನಿಮಾವು ಒಂದು – ಸಿನನೆಮಾದ ಆಕರ್ಷಣೆ – ಚಲನಚಿತ್ರದಲ್ಲಿ ಅಡಕವಾಗಿರುವ ಸಾಮಾಜಿಕ ಮೌಲ್ಯಗಳು, ಸಮಾಜ ವಿಮರ್ಶೆ ಮೊದಲಾದವುಗಳು – ಚಲನಚಿತ್ರ ಸಾಹಿತ್ಯ – ಜನಮನವನ್ನು ರಂಜಿಸುವಲ್ಲಿ ಹಾಡುಗಳ ಪಾತ್ರ – ಹಾಡುಗಳ ವೈವಿಧ್ಯ – ಚಲನಚಿತ್ರ ಪ್ರಕಾರಗಳು – ಕಲಾತ್ಮಕ ಚಿತ್ರಗಳು, ಶೈಕ್ಷಣಿಕ ಚಿತ್ರಗಳು – ಸಂವಹನ ಮಾಧ್ಯಮ | 8<br><br>8 | 8 |
| 24 | ಪಾಠಭಾಗದಲ್ಲಿ ಬಂದಿರುವ ಶತಕ ಪದ್ಯಗಳಲ್ಲಿ ವ್ಯಕ್ತವಾಗುವ ಆಶಯಗಳು – ದುರುಳರ ಪ್ರವೃತ್ತಿ – ಅಧಿಕಾರ ಬಂದಾಗ ಸಂಬಂಧಗಳನ್ನು ಮರೆಯುವ ದೊರೆಗಳ ಪ್ರವೃತ್ತಿ – ಇವುಗಳನ್ನು ಉದಾಹರಣೆಯ ಮೂಲಕ ಸ್ಪಷ್ಟಪಡಿಸುವುದು – ಲಂಚಗುಳಿತನದ ಸ್ವರೂಪ – ಲಂಚಕೋರರನ್ನು ವಿಡಂಬಿಸಿರುವುದು – ದೈವಾನುಗ್ರಹವಿರಲು ಕಾಲಾನುಕಾಲಕ್ಕೆ ಬಡವನು ಬಲ್ಲಿದನಾಗನೇ ಎಂಬುದನ್ನು ಸಮರ್ಥಿಸಿರುವ ರೀತಿ – ಇವೇ ಮೊದಲಾದವುಗಳನ್ನ ವಿಶದಪಡಿಸಿದ್ದರೆ.<br>ಭಾಷೆ, ನಿರೂಪಣಾ ಶೈಲಿಗೆ.<br><br>ಅಥವಾ<br><br>ಮಹಾಭಾರತ ಸಂಗ್ರಾಮದಲ್ಲಿ ತಮ್ಮಂದಿರನ್ನು, ಮಕ್ಕಳನ್ನು ಕಳೆದುಕೊಂಡ ಧುರ್ಯೋಧನ – ದು:ಖದಿಂದ ಮೂರ್ಛಿತನಾಗಿರುವುದು – ಪರಿಚಾರದಿಂದ ಮೂರ್ಛೆ ತಿಳಿದ ಧೂರ್ಯೋಧನ – ಅವನ ಸ್ಥಿತಿಯನ್ನು ಕಂಡು ಮರುಗುವ ಸಂಜಯ, ಧೃತರಾಷ್ಟ್ರ, ಗಾಂಧಾರಿ – ಧೃತರಾಷ್ಟ್ರನ ನಿವೇದನೆ – ಸಮರಾನುಬಂಧವನ್ನು ಬಿಸುಡಬೇಕೆಂಬ ಪ್ರಾರ್ಥನೆ – | 6<br>2<br><br>8 | 8 |

| | | | |
|---|---|---|---|
| | ಗುರುವಚನವನ್ನು ಮೀರಬಾರದೆಂಬ ಗಾಂಧಾರಿಯ ಉಪದೇಶ – ತನ್ನ ಮಕ್ಕಳನ್ನು ನೆನೆದು ದ:ಖಿಸುವುದು – ಗಾಂಧಾರಿಯ ದು:ಖವನ್ನು ಕಂಡು ಬೇಸರಿಸಿದ ಧೃತರಾಷ್ಟ್ರ – ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಭಿನ್ನಹ – ಧುರ್ಯೋಧನನ ಪ್ರತಿಕ್ರಿಯೆ – ತನ್ನ ಅನುಜರು ಇನ್ನಿಲ್ಲವಾಗಲು ತಾನು ಬದುಕಿದ್ದೇನು ಸಾರ್ಥಕ, ಜೀವದ ಮೇಲಿನ ಆಸೆಯನ್ನು ಬಿಟ್ಟೆನೆಂಬ ನಿರ್ಧಾರ – ಭೀಮಾರ್ಜುನರನ್ನು ಕೊಂದು ಕರ್ಣ, ದುಶ್ಯಾಸನ ಹಾಗೂ ಉಳಿದ ಸೋದರರ ಸಾವಿಗೆ ಸೇಡನ್ನು ತೀರಿಸುವೆನೆಂಬ ಅವನ ಪ್ರತಿಜ್ಞೆ – ತಾನು ಹೋದರೂ ಮಗನಾಗಿ ಧರ್ಮಜನಿಲ್ಲವೇ ಎಂಬ ಸಾಂತ್ವನ. | | |
| | | **Total** | **80** |

# Sample Question paper – (Kannada Language)

## 7. WEIGHT TO QUESTION BASED ANALYSIS

| Question No. | Content | L O.No. | Specific thinking skills(No) | Form of Questions | Score | Time |
|---|---|---|---|---|---|---|
| 1 | ಊರ್ಮಿಳಾ | 1.2 | 1.1 | Objective | 1 | 1 |
| 2 | ಗುರುವಚನಮಲಂಘನೀಯಂ | 5.2 | 1.2 | Objective | 1 | 1 |
| 3 | ಗುರುವಚನಮಲಂಘನೀಯಂ | 5.3 | 1.2 | Objective | 1 | 1 |
| 4 | ನಾಡಸಿರಿ | 5.19 | 1.1 | Objective | 1 | 1 |
| 5 ಅ | ಅವರವರ ದಾರಿ | 1.2 | 2.3 | Objective | 1 | 1 |
| 5 ಆ | ಆಗದು ಎಂದು | 4.9 | 2.3 | Objective | 1 | 1 |
| 5 ಇ | ಸಾವಿರಾರು ನದಿಗಳು | 2.2 | 2.3 | Objective | 1 | 1 |
| 5 ಈ | ಅಪ್ಪನೂ ಒಲೆಯುರಿಯೂ | 2.2 | 2.3 | Objective | 1 | 1 |
| 6 | ಸಕ್ಕರೆಗುಪ್ಪಂ ಸರಿಮಾಳ್ಪರೇ | 5.2 | 4.2 | Objective | 1 | 1 |
| 7 | ತಾಯಿ | 5.3 | 3.1 | Objective | 1 | 1 |
| 8 | ಊರ್ಮಿಳಾ | 1.3 | 3.1 | Objective | 1 | 1 |
| 9 | ಸಕ್ಕರೆಗುಪ್ಪಂ ಸರಿಮಾಳ್ಪರೇ | 5.3 | 4.2 | Objective | 1 | 1 |
| 10 | ನೆರೆ | 1.3 | 2.7 | S A | 2 | 3 |
| 11 | ನೀರವ ರಾತ್ರಿಯ ಮಾಯಾಲೋಕ | 2.2 | 2.6 | S A | 2 | 3 |
| 12 | ಬಣ್ಣದ ಲೋಕ | 4.9 | 2.4 | S A | 3 | 4 |
| 13 | ನಡೆಯುದೊಂದೇ ಭೂಮಿ | 3.3 | 2.5 | S A | 4 | 8 |
| 14 | ಸುಬ್ಬಣ್ಣ | 3.13 | 4.2 | S A | 4 | 8 |
| 15 | ತಾಯಿ | 2.2 | 2.7 | S A | 4 | 8 |
| 16 | ತರುಣ ಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು | 5.21 | 2.2 | S A | 4 | 8 |
| 17 | ಜಾಲಿಯ ಮರದಂತೆ | 3.3 | 2.4 | S A | 4 | 8 |
| 18 | ಬೂತಯ್ಯನ ಮಗ ಅಯ್ಯು | 4.10 | 3.1 | S A | 5 | 10 |
| 19 | ಅವರವರ ದಾರಿ | 1.3 | 4.3 | S A | 5 | 10 |
| 20 | ಕೆರೆಯ ದಡದಲ್ಲಿ | 1.3 | 2.7 | S A | 5 | 10 |
| 21 | ತಾಯಿ | 2.3 | 2.6 | S A | 5 | 10 |
| 22 | ನೆರೆ | 1.4 | 6.3 | S A | 5 | 10 |
| 23 | ನಾಡಸಿರಿ / ಬಣ್ಣದ ಲೋಕ | 5.2, 5.19 / 4.9, 4.10 | 2.6, 2.7 / 6.1, 6.2,6.3 | Essay | 8 | 19 |
| 24 | ಸಕ್ಕರೆಗುಪ್ಪಂ ಸರಿಮಾಳ್ಪರೇ / ಗುರುವಚನಮಲಂಘನೀಯಂ | 5.2, 5.19 / 5.3, 5.20 | 2.6, 2.7 / 6.1, 6.2,6.3 | Essay | 8 | 19 |
| Total | | | | | 80 | 150 |

# PLUS TWO SAMPLE QUESTION PAPER

## SUBJECT: KANNADA (LANGUGE)

## SET 2

# Sample Question paper – (Kannada Language)

## 1. Weight to Unit / Content and Learning Outcome

| ಕ್ರ.ಸ | ಘಟಕ | ಕಲಿಕಾ ಸಾಧನೆಗಳು | ಅಂಕಗಳು | ಶೇಕಡಾ |
|---|---|---|---|---|
| 1 | ಸಿರಿಬೆಳಸು | **1.1,1.2, 1.3,1.4** | 16 | **20** |
| 2 | ನವಪಲ್ಲವ | **2.1,2.2,2.3, 2.10** | 27(–8)=19 | **23.75** |
| 3 | ಸಂಸ್ಕೃತಿ ಸುಮ | **3.2,3.3,3.12,3.13** | 10 | **12.50** |
| 4 | ಬೆಳ್ಳಿತೆರೆ | **4.9,4.10,4.15** | 13 | **16.25** |
| 5 | ನುಡಿಸಿರಿ | **5.2,5.3,5.19,5.20,5.21** | 30 (–8) = 22 | **27.50** |
| | **TOTAL** | | 96–16=80 | **100** |

# Sample Question paper – (Kannada Language)

## 2. Weight to Thinking Skills

| Sl.No. | Thinking Skills | Score | Percentage |
|---|---|---|---|
| 1 | Conceptual understanding | 48 | 60 |
| 2 | Conceptual generation | 32 | 40 |
| | | 80 | 100 |

# Sample Question paper – (Kannada Language)

## 3. Weight to Type of Questions

| Sl.No | Type | No.of Questions | Score | Percentage |
|---|---|---|---|---|
| 1 | Objective | 12 | 12 | 15 |
| 2 | Short Answer | 13 | 52 | 65 |
| 3 | Essay | 2 | 16 | 20 |
| | Total | 28 | 80 | 100 |

# Sample Question paper – (Kannada Language)

## 4.Blue Print ಕನ್ನಡ ಮಾದರಿ ಪ್ರಶ್ನೆ ಪತ್ರಿಕೆ–ನೀಲ ನಕ್ಷೆ

| ಕ್ರ.ಸ. | Thinking Skills<br><br>Content | Thinking Skills Conceptual Understanding | | | Thinking Skills Conceptual Generation | | | TOTAL |
|---|---|---|---|---|---|---|---|---|
| | | OBJ | S A | ESSAY | OBJ | S A | ESSAY | |
| 1 | ಊರ್ಮಿಳಾ | | | | 1(1) | | | 1 |
| 2 | ಕೆರೆಯ ದಡದಲ್ಲಿ | | | | 1(1) | 5(1) | | 6 |
| 3 | ಅವರವರ ದಾರಿ | 1(1) | | | | | | 1 |
| 4 | ನೆರೆ | | 4(1) | | | 4(1) | | 8 |
| 5 | ಅಪ್ಪನೂ ಒಲೆಯುರಿಯೂ | 1(1) | | | | | | 1 |
| 6 | ತಾಯಿ | | | | 1(2) | | 8 (1)C | 10 |
| 7 | ಸಾವಿರಾರು ನದಿಗಳು | | 2(1)<br>5(1) | | | | | 7 |
| 8 | ನೀರವ ರಾತ್ರಿಯ ಮಾಯಾಲೋಕ | | 4(1) | | | 3(1)<br>2(1) | | 9 |
| 9 | ಜಾಲಿಯ ಮರದಂತೆ | 1(1) | | | | | | 1 |
| 10 | ನಡೆವುದೊಂದೇ ಭೂಮಿ | 1(1) | 2(1) | | | | | 3 |
| 11 | ಸುಬ್ಬಣ್ಣ | | 5(1) | | 1(1) | | | 6 |
| 12 | ಬಣ್ಣದ ಲೋಕ | | | 8(1) | | | | 8 |
| 13 | ಆಗದು ಎಂದು | 1(1) | 3(1) | | | | | 4 |
| 14 | ಬೂತಯ್ಯನ ಮಗ ಅಯ್ಯು | | | | 1(1) | | | 1 |
| 15 | ನಾಡಸಿರಿ | | | | | | 8(1) | 8 |
| 16 | ಸಕ್ಕರೆಗುಪ್ಪಂ ಸರಿಮಾಳ್ಪರೇ | | | | | 4(1) | | 4 |
| 17 | ತರುಣಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು | 1(1) | 4(1) | 8(1) C | | | | 13 |
| 18 | ಗುರುವಚನಮಲಂಘನೀಯಂ | | 5(1) | | | | | 5 |
| | TOTAL | 6(6) | 34(9) | 16–8 (2–1) = 8(1) | 6(6) | 18(5) | 16–8(2–1)=8 | 96–16=80 |
| | | | 48(16) | | | 32(12) | | 80(28) |

# HSE II – SAMPLE QUESTION PAPER

# SUBJECT - KANNADA (LANGUAGE)

Time : 2.30 Hrs

Cool of time : 15 Mnts

Max. Markls : 80

## ಸೂಚನೆಗಳು

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಸಮಯ'ದಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲಿ ಇತರರೊಂದಿಗೆ ಚರ್ಚಿಸುವುದಾಗಲಿ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

(ಆವರಣದಿಂದ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ)

1. 'ಉಭಯಕವಿ ಕಮಲರವಿ' ಎಂಬ ಬಿರುದಿಗೆ ಪಾತ್ರನಾದ ಕವಿ **(1)**

   (ನಂಜುಂಡ ಕವಿ, ರಾಘವಾಂಕ, ರನ್ನ, ಹರಿಹರ)

2. ಮಾಸ್ತಿ ವೆಂಕಟೇಶ ಐಯ್ಯಂಗಾರರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿದೆ? **(1)**

   (ಕಾಕನ ಕೋಟೆ, ಚೆನ್ನಬಸವ ನಾಯಕ, ಚಿಕವೀರರಾಜೇಂದ್ರ, ಸುಬ್ಬಣ್ಣ)

3. 'ಆಗದು ಎಂದು . . .' ಎಂಬ ಚಿತ್ರಗೀತೆ ಯಾವ ಚಲನಚಿತ್ರದ್ದಾಗಿದೆ? **(1)**

   (ಬೂತಯ್ಯನ ಮಗ ಅಯ್ಯು, ಬಂಗಾರದ ಮನುಷ್ಯ, ದೂರದ ಬೆಟ್ಟ, ವಂಶವೃಕ್ಷ)

4. 'ಅಪ್ಪನೂ ಒಲೆಯುರಿಯೂ' ಪದ್ಯವನ್ನು ಯಾವ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ? **(1)**

(ಹೇಮೆಯೊಡಲಲ್ಲಿ, ಒಂದಿಷ್ಟು ಹಸಿಮಣ್ಣು, ಬಾಗಿಲಾಚೆಯ ಮೌನ, ಕಡಲಿಗೆಷ್ಟೊಂದು ಬಾಗಿಲು)

(ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ)

5. ಅವರವರ ದಾರಿ – ಈ ಕವಿತೆಯನ್ನು ಬರೆದವರು ಯಾರು? (1)

6. ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಜಾಲಿಯ ಮರವನ್ನು ಯಾರಿಗೆ ಸಮೀಕರಿಸಿ ಹೇಳಿರುವರು? (1)

7. ಚಲನಚಿತ್ರವಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಸಣ್ಣಕತೆ ಯಾವುದು? (1)

(ಸೂಚನೆಯಂತೆ ಉತ್ತರಿಸಿರಿ)

8. ವರ್ಣ, ಆಶ್ಚರ್ಯ – ಈ ಪದಗಳ ತದ್ಭವ ರೂಪಗಳನ್ನು ಬರೆಯಿರಿ. (1)

9. ಬಾಣ – ಈ ಪದದ ಪರ್ಯಾಯ ಪದಗಳನ್ನು ಬರೆಯಿರಿ. (1)

10. ಪ್ರೀತಿದೋರು – ಸಂಧಿ ವಿಂಗಡಿಸಿ ಹೆಸರಿಸಿರಿ (1)

11. ಕೈಮುಗಿ – ವಿಗ್ರಹವಾಕ್ಯ ಬರೆದು ಸಮಾಸವನ್ನು ಹೆಸರಿಸಿರಿ (1)

12. ಕಂಕಣಬದ್ಧ – ಈ ನುಡಿಗಟ್ಟನ್ನು ಉಪಯೋಗಿಸಿಕೊಂಡು ವಾಕ್ಯವೊಂದನ್ನು ರಚಿಸಿರಿ (1)

13. ಕೆಳಗೆ ನೀಡಿರುವ ಸಾಲುಗಳ ಸ್ವಾರಸ್ಯವನ್ನು ಬರೆಯಿರಿ (2)

ಇವರು ಬಾಯಿ ಬಿಟ್ಟೊಡನೆ

ಅವರ ಬಾಯಿ ಕಟ್ಟಿತು

ಇವರ ಕಂಠ ಕೇಳಿದೊಡನೆ

ಅವರ ದನಿ ಇಂಗಿತು

14. 'ಮಹಾತ್ಮನು ಕನ್ನಡಿ ಜಗಕೆ' ಹೇಗೆ? (2)

15. ಕೆಳಗೆ ಕೊಟ್ಟಿರುವ ಮಿಶ್ರವಾಕ್ಯವನ್ನು ಸರಳ ವಾಕ್ಯಗಳನ್ನಾಗಿ ಬರೆಯಿರಿ (2)

ತನ್ನ ಮಹತ್ತರ ಸಂಶೋಧನೆಗಳ ಮೂಲಕ ಅದಾಗಲೇ ಪಿಯರ್ ಹೆಸರು ಗಳಿಸಿದ್ದರೂ ಅವನ ಮೇಧಾವಿತನ ಸ್ಪಷ್ಟವಾಗಿತ್ತಾದರೂ ಸೋರ್ಬನ್ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರೊಫೆಸರ್ ಹುದ್ದೆ ದಕ್ಕುವುದು ಸುಲಭದ ಮಾತಾಗಿರಲಿಲ್ಲ.

16. ಕೆಳಗೆ ನೀಡಿರುವ ಜೀವನ ಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ. (3)

ಒಂದು ದಿನ ವೀರಣ್ಣನವರು ಕಛೇರಿಯಲ್ಲಿ ಮಾತನಾಡುತ್ತ ಕುಳಿತಿದ್ದಂತೆ ನಾಟಕ ಕಂಪೆನಿಯ ಗಂಧರ್ವರು ಬಂದರು. ವೀರಣ್ಣನವರು ಅತ್ಯಂತ ಗೌರವಾದರಗಳಿಂದ ಅವರನ್ನು ಬರಮಾಡಿಕೊಂಡರು. ಅವರ ಕರುಣ ಕಥೆಯನ್ನು ಕೇಳಿದರು. 'ದಯವಿಟ್ಟು ಸಾಮಾನು ಕೊಡಿಸಿದರೆ ಮುಂದಿನ ಕ್ಯಾಂಪಿನಲ್ಲಿ ನಾಟಕಮಾಡಿ ಹಣ ಕಳುಹಿಸುತ್ತೇವೆ' ಎಂದರು ಗಂಧರ್ವ. ಅವರ ಕಥೆ ಕೇಳಿ ವೀರಣ್ಣನವರ ಕಣ್ಣುಗಳು ತೇವಗೊಂಡಿದ್ದವು. ಕೂಡಲೇ ಗಂಧರ್ವರ ಕೈ ಹಿಡಿದು ' ನೀವು ಏನೂ ಕೊಡಬೇಡಿ. ಸಾಮಾನುಗಳನ್ನು ಆವ:ಶ್ಯಕ ತೆಗೆದುಕೊಂಡು ಹೋಗಿ, ನಾಟಕ ಕಲೆಗೆ ನೀವು ಮಾಡಿರುವ ಸೇವೆಗೆ ಇಷ್ಟಾದರೂ ಗೌರವ ತೋರಿಸಬೇಡವೇ' ಎಂದು ಹೇಳಿದರು.

**17.** ಭಾವಾರ್ಥ ಬರೆಯಿರಿ. **(3)**

ಕೈ ಕೆಸರಾದರೆ ಬಾಯ್ ಮೊಸರೆಂಬ

ಹಿರಿಯರ ಅನುಭವ ಸತ್ಯ। ಇದ ನೆನಪಿಡಬೇಕು ನಿತ್ಯ

ದುಡಿಮೆಯ ನಂಬಿ ಬದುಕು। ಅದರಲೆ ದೇವರ ಹುಡುಕು

ಬಾಳಲಿ ಬರುವುದು ಬೆಳಕು,

ನಮ್ಮ ಬಾಳಲಿ ಬರುವುದು ಬೆಳಕು

**18.** ಆಂಗ್ಲ ಭಾಷೆಯಲ್ಲಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ **(4)**

Hot summer days remind me of my childhood in a little village. There was a large banyan tree right in the middle of the village, and I would spend many hours playing under it during my holidays. The tree was like a massive umbrella with its branches providing much needed shade and succour.

(banyan tree – ಆಲದ ಮರ, succour – ಆಶ್ರಯ)

**19.** ಕೆಳಗೆ ಕೊಟ್ಟಿರುವ ಪದ್ಯದ ಸಾಲಿಗೆ ಪ್ರಸ್ತಾರ ಹಾಕಿ, ಗಣ ವಿಭಜಿಸಿ, ಛಂದಸ್ಸನ್ನು ಬರೆಯಿರಿ **(4)**

ಅಣು ಮಾತ್ರಂ ಕೊಸರಿಲ್ಲದಾಳ್ದನೆಡೆಯೊಳ್ ಲಂಚಕ್ಕೊಡಂಬಟ್ಟು ಮಾ

(ಸಂಕ್ಷಿಪ್ತವಾಗಿ ಬರೆಯಿರಿ)

20. ಕೆಳಗೆ ಕೊಟ್ಟಿರುವ ಮಾತುಗಳ ಸಂದರ್ಭವನ್ನು ತಿಳಿಸಿ ಸ್ವಾರಸ್ಯವನ್ನು ಬರೆಯಿರಿ. (2*2=4)

ಅ). ಆಳ್ ಮುಂದೆ ನಡೆದುದಲ್ಲದೆ ಅರಸು ನಡೆವನೆ

ಆ). ಗುರುವಚನಮಲಂಘನೀಯಮ್

21. ರೇಡಿಯಂ ತಯಾರಿಕೆಯ ವೇಳೆ ಮೇರಿ ಕ್ಯೂರಿಗೆ ಎದುರಾದ ತೊಡಕುಗಳೇನು? ಅವುಗಳನ್ನು ನಿಭಾಯಿಸಿದ ಬಗೆ ಹೇಗೆ? ವಿವರಿಸಿರಿ . (4)

22. 'ನೆರೆ' ಕಥೆಯಲ್ಲಿ ಮಾನವನ ಕೃತಘ್ನ ಸ್ವಭಾವವನ್ನು ವಿಡಂಬಬಿಸಲಾಗಿದೆಯೇ? ನಿಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿ ಬರೆಯಿರಿ. (4)

23. ನೀವು ಓದಿದ ಪಾಠಭಾಗದಲ್ಲಿ ಸುಬ್ಬಣ್ಣನ ದ್ವಂದ್ವ ಸ್ವಭಾವ ಪ್ರತಿಫಲಿಸಿದ ಬಗೆಯನ್ನು ತಿಳಿಸಿರಿ (5)

24. ಆಸ್ವಾದನ ಟಿಪ್ಪಣಿ ಬರೆಯಿರಿ. (5)

ದಿನದ ಮೂಡಣ ರವಿಯ ಕಿತ್ತೆಸೆದು ನಮ್ಮ ಹೊಸ
ರವಿಯ ಪಡುವಣದಿ ಮೂಡಿಸಲು ಬೇಕು
ಹಳೆಯ ಪ್ರಕೃತಿಯ ತುರುಬ ಜಗ್ಗಿ ಆಚೆಗೆ ನೂಕಿ
ನಮ್ಮ ಹೊಸ ಋತು ನಿಯಮ ತಿರುಗಬೇಕು
ಹರಿವ ಗ್ರಹಗಳನೆಲ್ಲ ತರುಬಿ ನವ ಜಗವನ್ನು
ನೆರಳಾಗಿ ಸುತ್ತುವೊಲು ಮಾಡಬೇಕು
ಮುದುಕ ದಿಕ್ಕುಗಳ ಸೊಣಕನು ಮುರಿದು ಹೊಸ ದಿಕ್ಕು
ಗಳ ಮೇಲೆ ಹೊಸ ಬಾನ ಹೇರಬೇಕು

(ತುರುಬು – ಜಡೆ, ತರುಬು – ನಿಲ್ಲಿಸು, ಸೊಣಕ – ಸೊಂಟ)

25. ಪ್ರತಿಯೊಬ್ಬರು ತಮ್ಮತಮ್ಮ ಸುತ್ತುಮುತ್ತಲಿನ ಪರಿಸರವನ್ನು ಸ್ವಚ್ಛವಾಗಿರಿಸುವುದು ಅತೀ ಅಗತ್ಯ. ಪರಿಸಿರ ಸ್ವಚ್ಛತೆಯ ಮಹತ್ವವನ್ನು ತಿಳಿಯಪಡಿಸುವ ಲೇಖನವೊಂದನ್ನು ಬರೆಯಿರಿ. (5)

26. ಧರ್ಮರಾಯನೊಂದಿಗೆ ಸಂಧಿಮಾಡಿಕೊಳ್ಳುವಂತೆ ಬಿನ್ನವಿಸಿಕೊಂಡ ಧೃತರಾಷ್ಟ್ರನಿಗೆ ಧುರ್ಯೋಧನನು ನೀಡಿದ ಪ್ರತಿಕ್ರಿಯೆ ಏನು? ವಿವರಿಸಿರಿ. (5)

(ಒಂದೂವರೆ ಪುಟಕ್ಕೆ ಮೀರದಂತೆ ಬರೆಯಿರಿ)

27. 'ತಾಯಿ' ಕತೆಯಲ್ಲಿ ಕಥೆಗಾರ ಬಹುಸಂಗ್ರಹವಾಗಿ, ಸೂಚ್ಯವಾಗಿ ಮಾತೃ ಹೃದಯದ ಸಮರ್ಪಕ ಚಿತ್ರವನ್ನು ಬಿತ್ತರಿಸಿದ್ದಾರೆ – ಈ ಹೇಳಿಕೆಯನ್ನು ಆಧರಿಸಿ ನಿಮ್ಮ ಅಭಿಪ್ರಾಯಗಳನ್ನು ಒಳಗೊಂಡ ವಿಮರ್ಶಾತ್ಮಕ ಲೇಖನವೊಂದನ್ನು ಬರೆಯಿರಿ. (8)

ಅಥವಾ

ಒಂದು ಚಲನಚಿತ್ರದ ಯಶಸ್ಸಿನಲ್ಲಿ ಚಿತ್ರಕತೆ, ಸಂಭಾಷಣೆ ಮತ್ತು ಹಾಡುಗಳ ಪ್ರಾಧಾನ್ಯವನ್ನು ಸೋದಾಹರಣವಾಗಿ ವಿಶದಪಡಿಸಿರಿ.

28. ನಾಡಸಿರಿ ಕಾವ್ಯಭಗದಲ್ಲಿ ವರ್ಣಿತವಾದ ಕನ್ನಡನಾಡಿನ ಪ್ರಾಕೃತಿಕ ಸೌಂದರ್ಯವನ್ನು ನಿಮ್ಮ ಮಾತುಗಳಲ್ಲಿ ಬಣ್ಣಿಸಿರಿ. (8)

ಅಥವಾ

'ತರುಣ ಸೂರ್ಯಂ ಕತ್ತಲೆಯನೆ ಹೊಕ್ಕಂತಾಯ್ತು' ಕಾವ್ಯಭಾಗದಲ್ಲಿ ಬರುವ ಪ್ರತಿಯೊಂದು ಪಾತ್ರವೂ ತಮ್ಮ ತಮ್ಮ ತ್ಯಾಗ ಮನೋಭವಗಳನ್ನು ಪ್ರದರ್ಶಿಸುತ್ತವೆ – ಈ ಮಾತನ್ನು ಸಮರ್ಥಿಸಿಕೊಂಡು ವಿವರವಾದ ಪ್ರಬಂಧವೊಂದನ್ನು ಬರೆಯಿರಿ.

# Sample Question paper – (Kannada Language)

## 6.Answer Key/Value Points

| Q.No | Answer Key/Value Points | score | Toatal |
|---|---|---|---|
| 1 | ರಾಘವಾಂಕ | 1 | 1 |
| 2 | ಚಿಕ್ಕವೀರ ರಾಜೇಂದ್ರ | 1 | 1 |
| 3 | ಬಂಗಾರದ ಮನುಷ್ಯ | 1 | 1 |
| 4 | ಕಡಲಿಗೆಷ್ಟೊಂದು ಬಾಗಿಲು | 1 | 1 |
| 5 | ಜಿ. ಎಸ್ ಶಿವರುದ್ರಪ್ಪ | 1 | 1 |
| 6 | ದುಷ್ಟಜನರಿಗೆ | 1 | 1 |
| 7 | ಬೂತಯ್ಯನ ಮಗ ಅಯ್ಯು | 1 | 1 |
| 8 | ಬಣ್ಣ, ಅಚ್ಚರಿ | 1 | 1 |
| 9 | ಶರ, ಸಾಯಕ, ಅಂಬು | 1 | 1 |
| 10 | ಪ್ರೀತಿ + ತೋರು = ಪ್ರೀತಿದೋರು (ಆದೇಶ) | 1 | 1 |
| 11 | ಕೈಯನ್ನು ಮುಗಿ = ಕೈಮುಗಿ (ಕ್ರಿಯಾ ಸಮಾಸ) | 1 | 1 |
| 12 | ನಾಡಿನ ರಕ್ಷಣೆಗಾಗಿ ಪ್ರತಿಯೊಬ್ಬರೂ ಕಂಕಣಬದ್ಧರಾಗಬೇಕು. | 1 | 1 |
| 13 | ಬಡವರ ಪ್ರತಿಭಟನೆಯ ಮುಂದೆ ಶ್ರೀಮಂತರ ಸೊಕ್ಕು ಮುರಿಯಿತು ಎಂಬ ಭಾವ | 2 | 2 |
| 14 | ಕನ್ನಡಿಯು ಪ್ರತಿಬಿಂಬವನ್ನು ತೋರಿಸುತ್ತದೆ. ಅದು ತನ್ನನ್ನು ನೋಡಬೇಕೆಂದು ಕೂಗಿ ಕರೆಯುವುದಿಲ್ಲ. ನಾವೇ ಆಕರ್ಷಿತರಾಗಿ ನಮ್ಮ ಪ್ರತಿಬಿಂಬವನ್ನು ನೋಡುವುದಕ್ಕೆ ಅದರ ಬಳಿಗೆ ಸಾಗುತ್ತೇವೆ. ಮಹಾತ್ಮನು ಕನ್ನಡಿಯಂತಿರಬೇಕು. ಅವನ ಮಾರ್ಗದರ್ಶನವನ್ನು ಬಯಸಿ ಜನ ತಾವಾಗಿ ಬರಬೇಕು – ಇವೇ ಮುಂತಾದ ವಿಚಾರಗಳನ್ನು ಹೇಳಿದ್ದರೆ. | 2 | 2 |
| 15 | ಪಿಯರ್ ತನ್ನ ಮಹತ್ತರ ಸಂಶೋಧನೆಗಳ ಮೂಲಕ ಅದಾಗಲೇ ಹೆಸರು ಗಳಿಸಿದ್ದನು.<br>ಅವನ ಮೇಧಾವಿತನ ಸ್ಪಷ್ಟವಾಗಿತ್ತು.<br>ಸೋರ್ಬನ್ ವಿಶ್ವವಿದ್ಯಾನಿಲಯದಲ್ಲಿ ಒಂದು ಪ್ರೊಫೆಸರ್ ಹುದ್ದೆ ದಕ್ಕುವುದು ಮಾತ್ರ ಸುಲಭದ ಮಾತಾಗಿರಲಿಲ್ಲ. | 2 | 2 |
| 16 | ಒಂದು ದಿನ ನಾನು ಕಛೇರಿಯಲ್ಲಿ ಮಾತನಾಡುತ್ತ ಕುಳಿತಿದ್ದಂತೆ ನಾಟಕ ಕಂಪೆನಿಯ ಗಂಧರ್ವರು ಬಂದರು. ನಾನು ಅತ್ಯಂತ ಗೌರವಾದರಗಳಿಂದ ಅವರನ್ನು ಬರಮಾಡಿಕೊಂಡೆನು. ಅವರ ಕರುಣ ಕಥೆಯನ್ನು ಕೇಳಿದೆನು. 'ದಯವಿಟ್ಟು ಸಾಮಾನು ಕೊಡಿಸಿದರೆ ಮುಂದಿನ ಕ್ಯಾಂಪಿನಲ್ಲಿ ನಾಟಕಮಾಡಿ ಹಣ ಕಳುಹಿಸುತ್ತೇವೆ' ಎಂದು ಗಂಧರ್ವರು ನನ್ನಲ್ಲಿ ಹೇಳಿದರು. ಅವರ ಕಥೆ ಕೇಳಿ ನನ್ನ ಕಣ್ಣುಗಳು ತೇವಗೊಂಡಿದ್ದವು. ಕೂಡಲೇ ಗಂಧರ್ವರ ಕೈ ಹಿಡಿದು ' ನೀವು ಏನೂ ಕೊಡಬೇಡಿ. ಸಾಮಾನುಗಳನ್ನು | | |

| | | | |
|---|---|---|---|
| | ಆವ:ಶ್ಯಕ ತೆಗೆದುಕೊಂಡು ಹೋಗಿ, ನಾಟಕ ಕಲೆಗೆ ನೀವು ಮಾಡಿರುವ ಸೇವೆಗೆ ಇಷ್ಟಾದರೂ ಗೌರವ ತೋರಿಸಬೇಡವೇ' ಎಂದು ಹೇಳಿದೆನು. | 3 | 3 |
| 17 | ದುಡಿಮೆಯಿಂದಲೇ ಬದುಕು. ಕೈ ಕೆಸರಾದರೆ ಬಾಯಿ ಮೊಸರೆಂಬ ಹಿರಿಯರ ಅನುಭವ ಸತ್ಯವಾದುದು ಎಂದಿತ್ಯಾದಿಯಾಗಿ ಭಾವಾರ್ಥ ಬರೆದಿದ್ದರೆ | 3 | 3 |
| 18 | ಆಶಯ ಕೆಡದಂತೆ ಕನ್ನಡಕ್ಕೆ ಭಾಷಾಂತರಿಸಿದ್ದರೆ | 4 | 4 |
| 19 | ಪ್ರಸ್ತಾರ ಹಾಕಿದ್ದಕ್ಕೆ<br>ಗಣ ವಿಭಜನೆಗೆ<br>ಛಂದಸ್ಸನ್ನು ಹೆಸರಿಸಿದ್ದಕ್ಕೆ | 2<br>1<br>1 | 4 |
| 20 | ಮಾತುಗಳ ಸಂದರ್ಭವನ್ನು ವಿವರಿಸಿ ಸ್ವಾರಸ್ಯವನ್ನು ವಿಶದಪಡಿಸಿದ್ದರೆ | 2 +2 | 4 |
| 21 | ರೇಡಿಯಂ ಸಂಶೋಧನೆಗೆ ದೊರಕಿದ ಪ್ರಯೋಗಾಲಯದ ಸ್ಥಿತಿಗತಿ, ರೇಡಿಯಂನ ಅದಿರು ಫಿಚ್‌ಬ್ಲೆಂಡ್‌ನ ಕೊರತೆ, ಅನಾರೋಗ್ಯದ ಸವಾಲು – ರೇಡಿಯಂ ಸಂಶೋಧನೆಯಲ್ಲಿ ಸಫಲತೆ – ಇವೇಮೊದಲಾದವುಗಳನ್ನು ವಿವರಿಸಿದ್ದರೆ | 4 | 4 |
| 22 | ಅನಿರೀಕ್ಷಿತ ನೆರೆಯಿಂದ ಜಲಾವೃತವಾದ ಚೇನ್ನ ಪರಯನ ಮನೆ – ತನ್ನ ಹಾಗೂ ತನ್ನ ಪರಿವಾರವನ್ನು ರಕ್ಷಿಸುವ ಭರದಲ್ಲಿ ಸಾಕುನಾಯಿಯನ್ನು ಮರೆತ ಸನ್ನಿವೇಶ – ಅನಾಥವಾದ ನಾಯಿಯ ಪರಿಸ್ಥಿತಿ – ಮನುಷ್ಯನ ಕೃತಘ್ನ ಸ್ವಭಾವ – ರಕ್ಷಣೆಗಾಗಿ ಮೊರೆಯಿಡುವುದು – ಹಸಿವಿನ ಕೂಗು – ವಿಪತ್ತಿನ ಸಂದರ್ಭದಲ್ಲಿ ನಾಯಿ ತೋರಿದ ಸ್ವಾಮಿನಿಷ್ಠೆ – ಅದರ ದಾರುಣ ಅಂತ್ಯ . . ಇತ್ಯಾದಿ | 2<br>2 | 4 |
| 23 | ತೊರೆಯಪುರಕ್ಕೆ ಸುಬ್ಬಣ್ಣನ ಆಗಮನ – ಎಲ್ಲವನ್ನು ಬಿಟ್ಟು ಬೈರಾಗಿ ಬದುಕು – ಊರ ನದಿಯ ಬಳಿಯಲ್ಲಿ ಧ್ಯಾನ – ವೆಂಕಟ್ರಮಣ ಮತ್ತು ಸುಬ್ಬಣ್ಣನ ನಡುವಿನ ಭೇಟಿ – ವಿರಸ – ಪಿಟೀಲನ್ನು ನದಿಗೆಸೆಯುವುದು – ಅದನ್ನು ಮರಳಿ ತಂದ ವೆಂಕಟ್ರಮಣ – ಆತನ ಗುಣ ಸ್ವಭಾವಗಳಿಂದ ಸುಬ್ಬಣ್ಣ ಆಕರ್ಷಿತನಾಗುವುದು, ಶಿಷ್ಯನಾಗಿ ಸ್ವೀಕರಿಸುವುದು – ದೇವಾಲಯದಲ್ಲಿ ಪಿಟೀಲು ನುಡಿಸುವುದು – ತನ್ನ ಮಗಳಿಗೆ ಸಂಗೀತವನ್ನು ಕಲಿಸಿ ಕೊಡಲು ಸುಬೇದಾರರ ಒತ್ತಾಯ – ಅದಕ್ಕೆ ಸುಬ್ಬಣ್ಣನ ನಿರಾಕರಣೆ – ಸುಬೇದಾರರು ತಾವೇ ಖುದ್ದಾಗಿ ಭೇಟಿಯಾದ ಬಳಿಕ ನಿರ್ಧಾರ ಬದಲಿಸಿದುದು – ಸುಬೇದಾರರ ಕುಟುಂಬಕ್ಕೆ ಹತ್ತಿರವಾದುದು | 3<br>2 | 5 |
| 24 | ಪದ್ಯಭಾಗದ ಆಶಯವನ್ನು ವಿಸ್ತರಿಸಿ ಬರೆದಿದ್ದರೆ<br>ಭಾವಾರ್ಥ ಮತ್ತು ಸೂಚ್ಯಾರ್ಥಗಳ ಸೊಬಗನ್ನು ವಿವರಿಸಿದ್ದರೆ | 2<br>2 | 5 |

| | | | |
|---|---|---|---|
| | ಭಾಷೆ ಮತ್ತು ಶೈಲಿಗೆ | 1 | |
| 25 | ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಅಂಶಗಳನ್ನು ವಿಶದಪಡಿಸಿದ್ದರೆ<br>ಪರಿಸರ ಸ್ವಚ್ಛತೆಯ ಅಗತ್ಯವನ್ನು ವಿವರಿಸಿದ್ದರೆ<br>ಭಾಷೆ ಮತ್ತು ಶೈಲೆಗೆ | 2<br>2<br>1 | 5 |
| 26 | ಮಹಾಭಾರತ ಸಂಗ್ರಾಮದಲ್ಲಿ ತಮ್ಮಂದಿರನ್ನು, ಮಕ್ಕಳನ್ನು ಕಳೆದುಕೊಂಡ ಧುರ್ಯೋಧನ – ದು:ಖದಿಂದ ಮೂರ್ಛಿತನಾಗಿರುವುದು – ಪರಿಚಾರದಿಂದ ಮೂರ್ಛೆ ತಿಳಿದ ಧೂರ್ಯೋಧನ – ಅವನ ಸ್ಥಿತಿಯನ್ನು ಕಂಡು ಮರುಗುವ ಸಂಜಯ, ಧೃತರಾಷ್ಟ್ರ, ಗಾಂಧಾರಿ – ಧೃತರಾಷ್ಟ್ರನ ನಿವೇದನೆ – ಸಮರಾನುಬಂಧವನ್ನು ಬಿಸುಡಬೇಕೆಂಬ ಪ್ರಾರ್ಥನೆ – ಗುರುವಚನವನ್ನು ಮೀರಬಾರದೆಂಬ ಗಾಂಧಾರಿಯ ಉಪದೇಶ – ತನ್ನ ಮಕ್ಕಳನ್ನು ನೆನೆದು ದ:ಖಿಸುವುದು – ಗಾಂಧಾರಿಯ ದು:ಖವನ್ನು ಕಂಡು ಬೇಸರಿಸಿದ ಧೃತರಾಷ್ಟ್ರ – ಧರ್ಮರಾಯನೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಭಿನ್ನಹ – ಧುರ್ಯೋಧನನ ಪ್ರತಿಕ್ರಿಯೆ – ತನ್ನ ಅನುಜರು ಇನ್ನಿಲ್ಲವಾಗಲು ತಾನು ಬದುಕಿದ್ದೇನು ಸಾರ್ಥಕ – ಜೀವದ ಮೇಲಿನ ಆಸೆಯನ್ನು ಬಿಟ್ಟೆನೆಂಬ ನಿರ್ಧಾರ – ಭೀಮಾರ್ಜುನರನ್ನು ಕೊಂದು ಕರ್ಣ, ದುಶ್ಯಾಸನ ಹಾಗೂ ಉಳಿದ ಸೋದರರ ಸಾವಿಗೆ ಸೇಡನ್ನು ತೀರಿಸುವೆನೆಂಬ ಅವನ ಪ್ರತಿಜ್ಞೆ – ತಾನು ಹೋದರೂ ಮಗನಾಗಿ ಧರ್ಮಜನಿಲ್ಲವೇ ಎಂಬ ಸಾಂತ್ವನ. | 5 | 5 |
| 27 | ಕ್ರೂರಿಯಾದ ತಾಯಿಯೊಬ್ಬಳ ಕತೆಯನ್ನು ತನ್ನ ಎಳೆಯ ಮಗನಿಗೆ ಹೇಳುವುದು, ಮಗನನ್ನು ವಿಪತ್ತಿಗೆ ದೂಡಿದ ಆ ತಾಯಿಯಂತೆಯೇ ತಾನೂ ತನ್ನ ಹಿರಿಯ ಮಗನನ್ನು ವಿಪತ್ತಿಗೆ ದೂಡಿದೆನೆಂಬ ಅಪರಾಧ ಪ್ರಜ್ಞೆ ಇವೇ ಮೊದಲಾದವುಗಳನ್ನು ವಿಶದಪಡಿಸಿದ್ದರೆ – ಕ್ವತೆಯನ್ನು ಹೆಣೆದ ತಂತ್ರ – ಮಾತೃಹೃದಯದ ತುಮುಲಗಳನ್ನು ಚಿತ್ರಿಸಿದ ರೀತಿ – ಅಬ್ಬಕ್ಕಳ ಪಾತ್ರಚಿತ್ರಣ ಇವೇ ಮೊದಲಾದವುಗಳನ್ನು ಒಳಗೊಂಡ ಬರಹಕ್ಕೆ<br>ಭಾಷೆ ಮತ್ತು ಶೈಲಿಗೆ<br><br>ಅಥವಾ<br><br>ಜನಪ್ರಿಯ ದೃಶ್ಯ ಮಾಧ್ಯಮಗಳಲ್ಲಿ ಸಿನಿಮಾವು ಒಂದು – ಸಿನನೆಮಾದ ಆಕರ್ಷಣೆ – ಚಲನಚಿತ್ರದ ಪ್ರಧಾನ ಘಟಕಗಳಾಗಿರುವ ಚಿತ್ರಕತೆ, ಸಂಭಾಷಣೆ ಮತ್ತು ಹಾಡುಗಳ ಪ್ರಾಧಾನ್ಯ – ಚಲನಚಿತ್ರದಲ್ಲಿ ಅಡಕವಾಗಿರುವ ಸಾಮಾಜಿಕ ಮೌಲ್ಯಗಳು, ಸಮಾಜ ವಿಮರ್ಶೆ ಮೊದಲಾದವುಗಳು – ಚಲನಚಿತ್ರ ಸಾಹಿತ್ಯ – ಜನಮನವನ್ನು ರಂಜಿಸುವಲ್ಲಿ ಹಾಡುಗಳ ಪಾತ್ರ – ಹಾಡುಗಳ | 3<br>3<br><br>2<br><br><br><br>4 | 8<br><br><br><br><br><br><br>8 |

| | | | |
|---|---|---|---|
| | ವೈವಿಧ್ಯ | 4 | |
| 28 | ಕನ್ನಡ ನಾಡಿನ ಕುರಿತಾದ ಭೌಗೋಳಿಕ ವಿಸ್ತಾರ – ಸಮೃದ್ಧವಾಗಿರುವ ಜಲ ಸಂಪತ್ತು, ಕೃಷಿ ಭೂಮಿ – ನೋಡುಗರ ಕಣ್ಣಿಗೆ ಪಾರಣೆ – ವೈವಿಧ್ಯ ಬೆಳೆ – ಪಕ್ಷಿ ಸಂಕುಲ – ಯುವಕರ ಯುವತಿಯರ ಜಾಣ್ಮೆ ಹಾಗೂ ತ್ಯಾಗ ಮನೋಭಾವ – ಶ್ರಮ ಜೀವನ.<br>ಭಾಷೆ ಮತ್ತು ಶೈಲಿಗೆ<br><br>ಅಥವಾ<br><br>ಕಾವ್ಯಭಾಗದ ಸಂದರ್ಭ – ವಿಶ್ವಾಮಿತ್ರನ ಕೃತಕ ಸೃಷ್ಟಿ – ಕಾನನದಲಿ ಎದುರಾದ ದಳ್ಳುರಿಗೆ ಕಂಗೆಟ್ಟ ಹರಿಶ್ಚಂದ್ರನ ರೋದನ – ಅವನ ತ್ಯಾಗ ಮನೋಭಾವ – ಮಂತ್ರಿ ಸತ್ಯಕೀರ್ತಿಯ ಮಾತುಗಳಲ್ಲಿ ವ್ಯಕ್ತವಾಗುವ ಸಮರ್ಪಣಾ ಮನೋಭಾವ – ಹರಿಶ್ಚಂದ್ರನ ಸಾಂತ್ವನದ ಮಾತುಗಳು – ರೋಹಿತಾಶ್ವನ ಅಭಿಪ್ರಾಯಕ್ಕೆ ಹರಿಶ್ಚಂದ್ರನ ಪ್ರತಿಕ್ರಿಯೆ – ಚಂದ್ರಮತಿಯ ತ್ಯಾಗ | 6<br><br>2<br><br><br><br>8 | 8<br><br><br><br><br><br>8 |
| | **Total** | | **80** |

# Sample Question paper – (Kannada Language)

## 7. WEIGHT TO QUESTION BASED ANALYSIS

| Question No. | Content | L O.No. | Specific thinking skills(No) | Form of Questions | Score | Time |
|---|---|---|---|---|---|---|
| 1 | ತರುಣ ಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು | 5.2 | 2.1 | Objective | 1 | 1 |
| 2 | ಸುಬ್ಬಣ್ಣ | 3.3 | 3.5 | Objective | 1 | 1 |
| 3 | ಆಗದು ಎಂದು | 4.9 | 1.1 | Objective | 1 | 1 |
| 4 | ಅಪ್ಪನೂ ಒಲೆಯುರಿಯೂ | 2.2 | 1.3 | Objective | 1 | 1 |
| 5 | ಅವರವರ ದಾರಿ | 1.3 | 3.2 | Objective | 1 | 1 |
| 6 | ಜಾಲಿಯ ಮರದಂತೆ | 3.13 | 1.4 | Objective | 1 | 1 |
| 7 | ಬೂತಯ್ಯನ ಮಗ ಅಯ್ಯು | 4.14 | 4.2 | Objective | 1 | 1 |
| 8 | ಕೆರೆಯ ದಡದಲ್ಲಿ | 1.2 | 2.2 | Objective | 1 | 1 |
| 9 | ನಡೆಯುದೊಂದೇ ಭೂಮಿ | 3.13 | 2.2 | Objective | 1 | 1 |
| 10 | ಊರ್ಮಿಳಾ | 1.2 | 3.1 | Objective | 1 | 1 |
| 11 | ತಾಯಿ | 2.1 | 2.1 | Objective | 1 | 1 |
| 12 | ತಾಯಿ | 2.1 | 2.1 | Objective | 1 | 1 |
| 13 | ಸಾವಿರಾರು ನದಿಗಳು | 2.7 | 3.4 | S A | 2 | 2 |
| 14 | ನಡೆಯುದೊಂದೇ ಭೂಮಿ | 3.13 | 2.4 | S A | 2 | 2 |
| 15 | ನೀರವ ರಾತ್ರಿಯ ಮಾಯಾಲೋಕ | 2.10 | 4.2 | S A | 2 | 2 |
| 16 | ನೀರವ ರಾತ್ರಿಯ ಮಾಯಾಲೋಕ | 2.8 | 5.2 | S A | 3 | 4 |
| 17 | ಆಗದು ಎಂದು | 4.15 | 1.3 | S A | 3 | 4 |
| 18 | ನೆರೆ | 1.3, 1.5 | 4.5 | S A | 4 | 8 |
| 19 | ಸಕ್ಕರೆಗುಪ್ಪಂ ಸರಿಮಾಳ್ಪರೇ | 5.20 | 5.4 | S A | 4 | 8 |
| 20 | ತರುಣ ಸೂರ್ಯಂ ಕತ್ತಲೆಯನೆ ಪೊಕ್ಕಂತಾಯ್ತು | 5.2, 5.3 | 1.3, 2.4 | S A | 4 | 8 |
| 21 | ನೀರವ ರಾತ್ರಿಯ ಮಾಯಾಲೋಕ | 2.3, 2.6, 2.9 | 2.5 | S A | 4 | 8 |
| 22 | ನೆರೆ | 1.2, 1.3 | 2.5 | S A | 4 | 8 |
| 23 | ಸುಬ್ಬಣ್ಣ | 3.3, 3.11 | 2.5 | S A | 5 | 11 |
| 24 | ಸಾವಿರಾರು ನದಿಗಳು | 2.1, 2.7 | 3.3 | S A | 5 | 11 |
| 25 | ಕೆರೆಯ ದಡದಲ್ಲಿ | 1.3, 1.10 | 2.5 | S A | 5 | 11 |
| 26 | ಗುರುವಚನಮಲಂಘನೀಯಂ | 5.2, 5.3 | 2.2, 2.3 | S A | 5 | 11 |
| 27 | ತಾಯಿ/ ಬಣ್ಣದ ಲೋಕ | 2.1, 2.6, 2.8 / 4.15, 4.16 | 6.5, 6.6, 6.7/ 2.4,2.6 | Essay | 8 | 20 |
| 28 | ನಾಡಸಿರಿ/ ತರುಣ ಸೂರ್ಯಂ ಕತ್ತಲೆಯನೆ | 5.2, | 6.5, 6.6, | Essay | 8 | 20 |

| | | | | | | |
|---|---|---|---|---|---|---|
| | ಪೊಕ್ಕಂತಾಯ್ತು | **5.3/ 5.2, 5.3** | **6.7/ 2.5,2.6** | | | |
| **Tota l** | | | | | **80** | **150** |